O.S.221/2011

PW-1

ದಿ. 01.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ವಿಡಿಜಿ ರವರಿಂದಃ-**

ಸರ್ವೆ ನಂ.29/4 ರಲ್ಲಿ ಒಟ್ಟು 27 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೊದಲಿಗೆ ನನ್ನ ತಾಯಿಯಾದ ನಂಜಮ್ಮರವರ ಹೆಸರಿಗೆ ಇತ್ತು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪೂರ್ವ ಪಶ್ಚಿಮ 63 ಅಡಿ ಉತ್ತರ ದಕ್ಷಿಣ 41 ಅಡಿ ಜಾಗದಲ್ಲಿ ಪ್ರತಿವಾದಿಯರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಕಟ್ಟಿಕೊಂಡಿರುವ ಮನೆಯ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ರಸ್ತೆ ಇದೆ ಆದರೆ ಅದು ಅವರದು ಅಲ್ಲ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಕೆಂಪೇಗೌಡರ ಸೈಟು ಇದೆ ಎಂದರೆ ಸರಿಯಲ್ಲ. ಉತ್ತರಕ್ಕೆ ಕಬ್ಬಾಳೇಗೌಡರ ಸೈಟು ಇದೆ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಕೆಂಚೇಗೌಡನ ಸೈಟು ಇದೆ ಎಂದರೆ ಸರಿ. ಈ ಚಕ್ಕುಬಂದಿಯ ನಡುವೆ ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರು ಕಟ್ಟಿಕೊಂಡಿಲ್ಲ ಅದು ನನ್ನ ಮನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಕಟ್ಟಿಕೊಂಡಿರುವ ಮನೆಗೆ ಪಂಚಾಯತಿಯಿಂದ ಅವರ ಹೆಸರಿಗೆ ಖಾತೆ ಸಹ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಸಂಬಂಧಿಸಿದ ಮನೆ ಇದೆ ಎಂಬ ವಿಚಾರವನ್ನು ನಾನು ಹೇಳಿ ಬರೆಸಿರುತ್ತೇನೆ.

O.S.221/2011

PW-1

ದಿನಾಂಕ 18.06.2019 ರಂದು ನಾನು ಅಣ್ಣ ತಮ್ಮಂದಿರು ನಮ್ಮ ಕುಟುಂಬದ ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ದಾವಾ ಸ್ವತ್ತು ನನ್ನ ಹಿಸ್ಸೆಗೆ ಬಂದಿರುತ್ತದೆ. ನನ್ನ ಭಾಗಕ್ಕೆ ಬಂದ 13 ಗುಂಟೆ ಜಮೀನಿನ ಪೂರ್ವಕ್ಕೆ ರಸ್ತೆ ಮತ್ತು ಪಶ್ಚಿಮಕ್ಕೆ ಸಿದ್ದಮ್ಮನ ಜಮೀನು ಬರುತ್ತದೆ. ಕರಿಯಪ್ಪ ನನ್ನ ಅಣ್ಣ. ದಾವಾ ಸ್ವತ್ತು ನನ್ನ ಭಾಗಕ್ಕೆ ಯಾವತ್ತು ಬಂದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಕೊನೆಯದಾಗಿ ನೀಡಲಾಯಿತು.

ಓ ಹೇ ಕೇ ಸರಿ ಇದೆ

(ರಾಧಾ ಎಸ್ )
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .